ಓ.ಎಸ್. ನಂ. 240-2013

ದಿನಾಂಕ : 13-8-2015
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊದಿಸಲಾಯಿತು.
ಮುಂದುವರೆದ ಪಾಟೀ ಸವಾಲು :

ನಮ್ಮ ಮನೆತನಕ್ಕೆ ಸದೆಪ್ಪನವರ ಎಂದೂ ಸಹ ಕರೆಯುತ್ತಾರೆ ಎಂದರೆ ಸರಿ. ಸುಣದಕುಪ್ಪಿ ಮತ್ತು ಸದೆಪ್ಪನವರ ಈ ಎರಡೂ ಹೆಸರುಗಳನ್ನು ನಮ್ಮ ಮನೆತನಕ್ಕೆ ಕರೆಯುತ್ತಾರೆ. ನನ್ನ ತಾಯಿಯ ತವರು ಮನೆ ಹುಣಸೇಕಟ್ಟಿ ಗ್ರಾಮ ಇರುತ್ತದೆ. ನನ್ನ ತಂದೆ ಮರಣ ಹೊಂದಿದ ನಂತರ 10 ವರ್ಷಗಳವೆರೆಗ ನಾನು ಹುಣಸೇಕಟ್ಟಿ ಗ್ರಾಮದಲ್ಲೇ ವಾಸವಾಗಿದ್ದೆ ಎಂದರೆ ಸರಿ. ನಾನು ಅಲ್ಲಿ 2 ನೇ ತರಗತಿವರೆಗೆ ಶಾಲೆಯನ್ನು ಸಹ ಕಲಿತಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಇಮ್ಮ ಒಂದು ಶಾಲಾ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನನ್ನ ತಂದೆ ಮರಣ ಹೊಂದಿದಾಗ ನನಗೆ 4 ರಿಂದ ನಾಲ್ಕೂವರೆ ವರ್ಷ ವಯಸ್ಸಾಗಿತ್ತು ಎಂದರೆ ಸರಿ.

ನನ್ನ ತಂದೆ ಶಿವಪ್ಪನಿಗೆ ಪಾರ್ವತೆವ್ವ ಹೆಂಡತಿ ಇರುತ್ತಾಳೆ ಎಂದರೆ ಸರಿ. ಅಂದರೆ ಅವಳು ನನ್ನ ತಂದೆಯ ಮೊದಲನೆ ಹೆಂಡತಿ ಇರುತ್ತಾಳೆ. ನನ್ನ ತಂದೆಯ ಮೊದಲನೆಯ ಹೆಂಡತಿಯಿಂದ 2 ನೇ ಪ್ರತಿವಾದಿ ಜನಿಸಿರುತ್ತಾನೆ ಎಂದರೆ ಸರಿ. 2 ನೇ ಪ್ರತಿವಾದಿ 14 ವರ್ಷ ಪ್ರಾಯದವನಾಗಿದ್ದಾಗ ಪಾರ್ವತೆವ್ವ ಮರಣ ಹೊಂದಿರುತ್ತಾಳೆ ಎಂದರೆ ಸರಿ. 2 ನೇ ಪ್ರತಿವಾದಿಯ ತಾಯಿ ಮರಣ ಹೊಂದಿದ 1 ವರ್ಷದೊಳಗೆ 2 ನೇ ಪ್ರತಿವಾದಿಯ ಮದುವೆ ಆಗಿರುತ್ತದೆ. 2 ನೇ ಪ್ರತಿವಾದಿಯ ಮದುವೆ ಅವಳು ಮರಣ ಹೊಂದಿ 10 ವರ್ಷದ ನಂತರ ಆಗಿರುವುದು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹೆಂಡತಿ ಮತ್ತು ನನ್ನ ತಂದೆಯ ಮಧ್ಯ ವೈಮನಸ್ಸು ಉಂಟಾದಾಗ ನನ್ನ ತಂದೆ ನನ್ನ ತಾಯಿಯನ್ನು ಉಡಕಿ ಮದುವೆ ಆಗಿರುತ್ತಾನೆ ಎಂದರೆ ಸರಿಯಲ್ಲ ಆದರೆ 2 ನೇ ಮದುವೆ ಆಗಿರುತ್ತಾನೆ. ನನ್ನ ತಾಯಿಯು ನನ್ನ ತಂದೆಯನ್ನು ಮದುವೆ ಆಗುವ ಪೂರ್ವದಲ್ಲಿ ಅವಳಿಗೆ ಹುಲಮಣಿ ಗ್ರಾಮದ ಹುದ್ದಾರ ಎಂಬುವವರ ಮನೆಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ಆ ರೀತಿ ಮೊದಲನೆ ಮದುವೆ ಆಗಿರುವ ವಿಷಯ ನನಗೆ

ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಯ ಮೊದಲನೆಯ ಗಂಡ ಮರಣ ಹೊಂದಿದ ನಂತರ ನನ್ನ ತಾಂದೆಯನ್ನು ಮದುವೆ ಆಗಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಾಯಿ ರುದ್ರವ್ವ ಹಾಗೂ 1 ನೇ ಪ್ರತಿವಾದಿಯ ತಾಯಿ ಕಲ್ಲವ್ವ ಅಕ್ಕತಂಗಿಯರು ಎಂದರೆ ಸರಿ. ನನ್ನ ತಾಯಿ ನನ್ನ ತಂದೆಯನ್ನು 2 ನೇ ಮದುವೆ ಆದ 4-5 ವರ್ಷಗಳ ನಂತರ 1 ನೇ ಪ್ರತಿವಾದಿಯ ತಾಯಿ ಮರಣ ಹೊಂದಿರುತ್ತಾಳೆ ಎಂದರೆ ಸರಿ. ನನ್ನ ತಾಯಿ ಮದುವೆ ಆಗಿ 4-5 ವರ್ಷಗಳ ನಂತರ ಮಹಾದೇವಿ ಎಂಬ ಮಗಳು ಹುಟ್ಟಿದ್ದಳು ಎಂದರೆ ಸರಿ. ನನ್ನ ಸಹೋದರಿ ಮಹಾದೇವಿ ಹುಟ್ಟಿದ್ದ 4-5 ವರ್ಷಗಳ ನಂತರ ನಾನು ಜನಿಸಿರುತ್ತೇನೆ ಎಂದರೆ ಸಾಕ್ಷಿಯು 2 ವರ್ಷಗಳ ನಂತರ ಜನಿಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಹಾಗೂ 2 ನೇ ಪ್ರತಿವಾದಿಯ ಮಧ್ಯ 25 ವರ್ಷಗಳ ಅಂತರ ಇರುತ್ತದೆ ಎಂದರೆ ಸಾಕ್ಷಿಯು 20 ವರ್ಷ ಇರುತ್ತದೆ ಎಂದು ಹೇಳುತ್ತಾರೆ. ನನ್ನ ತಂದೆ 17-2-1972 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮರಣ ಹೊಂದುವ 8 ತಿಂಗಳ ಪೂರ್ವದಲ್ಲಿ 1 ನೇ ಪ್ರತಿವಾದಿಯ ತಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ, ಅದಕ್ಕೂ ಪೂರ್ವದಲ್ಲಿ 1 ನೇ ಪ್ರತಿವಾದಿಯ ತಾಯಿ ಮರಣ ಹೊಂದಿದ್ದಳು ಎಂದರೆ ಸರಿ, 1 ನೇ ಪ್ರತಿವಾದಿಯು ಚಿಕ್ಕವನಿದ್ದಾಗಲೇ ಆತನ ತಂದೆ ತಾಯಿಗಳು ಮರಣ ಹೊಂದಿದ್ದರಿಂದ 1 ನೇ ಪ್ರತಿವಾದಿಯನ್ನು 2 ನೇ ಪ್ರತಿವಾದಿಯೇ ನೋಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆದರೆ ಅವನು ಬೇರೆ ವಾಸವಾಗಿದ್ದನು ಎಂದು ಹೇಳುತ್ತಾರೆ. ಆ ರೀತಿ ಬೇರೆ ವಾಸವಾಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದಾಗ ನಾನು ಚಿಕ್ಕವನಿದ್ದರಿಂದ ಮನೆತನದ ಉಸ್ತುವಾರಿಯನ್ನು 2 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ನನ್ನ ತಾಯಿ ಹಾಗೂ 2 ನೇ ಪ್ರತಿವಾದಿಯ ತಾಯಿಯ ಮಧ್ಯ ಹೊಂದಾಣಿಕೆ ಆಗದೇ ಇರುವುದರಿಂದ ನಾನು ಹುಣಶೀಕಟ್ಟಿಯಲ್ಲಿ ಹೋಗಿ ಉಳಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹುಣಶೀಕಟ್ಟಿಯಲ್ಲಿ ಹೋಗಿ ಉಳಿಯಲು ಕಾರಣ ಏನಂದರೆ 2 ನೇ ಪ್ರತಿವಾದಿ ನನಗೆ ಹೊಡೆಯುತ್ತಿದ್ದನು ಆದ್ದರಿಂದ ಹೋಗಿರುತ್ತೇನೆ. ನಾವು ಹುಣಶೀಕಟ್ಟಿ ಗ್ರಾಮದಲ್ಲಿ ಹೋಗಿ ಉಳಿದಿದ್ದರಿಂದ ನಮ್ಮ ಆಸ್ತಿ ಎಲ್ಲವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿ.

ಸರ್ವೆ ನಂ. 94/3 ಕ್ಷೇತ್ರ 1 ಎಕರೆ 23 ಗುಂಟೆ ಇದು ಶಿವಪ್ಪ ಹಾಗೂ ಬಸಪ್ಪನಿಗೆ ಅವರ ತಂದೆಯಿಂದ ಬಂದಂತಹ ಆಸ್ತಿ ಎಂದರೆ ಸರಿ. ನಂತರ ಅವರ ತಂದೆ ಮರಣ ಹೊಂದಿದ ಮೇಲೆ ಅದು ಶಿವಪ್ಪ ಹಾಗೂ ಬಸಪ್ಪನಿಗೆ ವಾರಸಾನಾತೆಯಿಂದ ಬಂದಿರುತ್ತದೆ ಎಂದರೆ ಸರಿ. ಮತ್ತು ಅವರಿಬ್ಬರ ಹೆಸರೂ ಸಾಮೂಹಿಕನಾತೆಯಿಂದ ದಾಖಲಾಯಿತು ಎಂದರೆ ಸರಿ. ಆ ರೀತಿ 1997 ವರೆಗೆ ಸಾಮೂಹಿಕನಾತೆಯಿಂದಲೇ ಮುಂದದುವರೆದುಕೊಂಡು ಬಂದಿತ್ತು ಎಂದರೆ ಇದ್ದಿರಬಹುದು. ನಂತರ 1997 ರಲ್ಲಿ ವಾಟ್ನಿ ಮಾಡಿಕೊಂಡ ಪ್ರಕಾರ ಅದು 1 ನೇ ಪ್ರತಿವಾದಿಗೆ ಹೋಗಿರುತ್ತದೆ ಎಂದರೆ ಸರಿ. ಸರ್ವೆ ನಂ. 94/3 ಈ ಆಸ್ತಿಯ ಕುರಿತು 1942 ರಲ್ಲಿ ವಾಟ್ನಿ ಆಗಿದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ಪ್ರಕಾರ ಎಂಇ ನಂ. 1817 ಸಹ ದಾಖಲಾಗಿದೆ ಎಂದು ಸುಳ್ಳು ಹೇಳಿರುತ್ತೇನೆಂದರೆ ಸರಿಯಲ್ಲ. ಸದರಿ ಎಂಇ ನಂ. 1817 ಇದು ಶಿವಪ್ಪ ಮತ್ತು ಬಸಪ್ಪ ಇವರ ಮಧ್ಯ ಆದ ವಾರಸಾ ಪ್ರಕಾರ ದಾಖಲಾಗಿದ್ದ ದಾಖಲೆ ಎಂದರೆ ಸರಿಯಲ್ಲ. ಬಸಪ್ಪ ಈತ 1943 ರಲ್ಲಿ ಮರಣ ಹೊಂದಿರುತ್ತಾನೆ ಎಂದರೆ ಸರಿ. ಆತ ಮರಣ ಹೊಂದಿದ ನಂತರ ಆತನ ಎಲ್ಲ ಆಸ್ತಿಗಳಿಗೆ ಶಿವಪ್ಪ ಹಾಗೂ ಬಸವಣ್ಣೆಪ್ಪನ ಹೆಸರುಗಳು ದಾಖಲಾದವು ಎಂದರೆ ಸರಿ. ಅವು ಸಾಮೂಹಿಕನಾತೆಯಿಂದಲೇ ದಾಖಲಾಗಿದ್ದವು ಎಂದರೆ ಸರಿಯಲ್ಲ. ಮತ್ತು ಸದರಿ ಬಸಪ್ಪ ಮರಣ ಹೊಂದಿದ ನಂತರ ಸರ್ವೆ ನಂ. 94/3, 94/13, 94/9, 94/2 ಈ ಆಸ್ತಿಗಳೆಲ್ಲವೂ ಶಿವಪ್ಪ ಹಾಗೂ ಬಸವಣ್ಣೆಪ್ಪನ ಸಾಮೂಹಿಕನಾತೆಯಿಂದಲೇ ದಾಖಲಾದವು ಎಂದರೆ ಸರಿಯಲ್ಲ. ಈ ರೀತಿ ಸಾಮೂಹಿಕ ದಾಖಲಾಗಿರುವ ಬಗ್ಗೆ ಎಂಇ ನಂ. 1817 ಆಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಸಾಮೂಹಿಕವಾಗಿ ಹೆಸರುಗಳು ದಾಖಲಾಗಿದ್ದರೂ ಸಹ ನಾನು ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ

.ಹೆ ಪ್ರ ದ ನ್ಯಾ ದಂ, ಬೈಲಹೊಂಗಲ